28

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ, ರವರು ನಿಯಮ 330 ರಡಿ ನೀಡಿರುವ ಸೂಚನಾ ಪತ್ರಕ್ಕೆ ಸರ್ಕಾರದ ಉತ್ತರ ನೀಡುವ ಬಗ್ಗೆ**

***ವಿಷಯ:-*** "ಶಿಕ್ಷಕರು ಮತ್ತು ಉಪನ್ಯಾಸಕರ ವೇತನವನ್ನು ನಂಬಿಕೊಂಡು ಜೀವನ ನಡೆಸುತ್ತಿದ್ದು ಪ್ರತಿ ತಿಂಗಳು ನಿಗದಿತ ಸಮಯದಲ್ಲಿ ವೇತನ ಆಗದೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದ್ದರಿಂದ, ಪ್ರತಿ ತಿಂಗಳು 1ನೇ ತಾರೀಖಿನಂದು ವೇತನ ಪಾವತಿಸಲು ವಿಳಂಬವಾಗುತ್ತಿರಲು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಮೂಲಕ ವೇತನ ಬಿಡುಗಡೆಯಾಗುತ್ತಿರುವುದೇ ಕಾರಣವಾಗಿದೆ. ಆದ್ದರಿಂದ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಸ್ಟೇಟ್ ಹೆಡ್ ಮೂಲಕ ನೇರವಾಗಿ ಶಿಕ್ಷಕರಿಗೆ ಪ್ರತಿ ತಿಂಗಳು 1ನೇ ತಾರೀಖಿನಿಂದ ವೇತನ ಪಾವತಿಸಲು ಕ್ರಮ ಕೈಗೊಳ್ಳಬೇಕೆಂಬ ವಿಷಯದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಲು ಬಯಸಿರುತ್ತಾರೆ"

***ಸರ್ಕಾರದ ಉತ್ತರ:-*** ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ರಾಜ್ಯದ ಸಾಲವಲ್ಲದ ನಿವ್ವಳ ರಾಜ್ಯದ ರಾಜಸ್ವದಲ್ಲಿ (NLNORR) ಶೇಕಡ 35% ರಷ್ಟನ್ನು ಹಂಚಿಕೆಗೊಳಿಸುವ ಸಂಬಂಧ ಮಾಡಿರುವ ಶಿಫಾರಸ್ಸಿನ ನಂತರ ಜಿಲ್ಲಾ/ ತಾಲ್ಲೂಕು/ಗ್ರಾಮ ಪಂಚಾಯಿತಿಗಳಿಗೆ ಶೇಕಡವಾರು ಹಂಚಿಕೆ ಈ ಕೆಳಕಂಡಂತೆ ಇರುತ್ತದೆ.

| ಪಂಚಾಯಿತಿಯ ವಿಧ | ಶೇಕಡವಾರು |
|---|---|
| ಜಿಲ್ಲಾ ಪಂಚಾಯತ್ | 31.33% |
| ತಾಲ್ಲೂಕು ಪಂಚಾಯತ್ | 53.98 |
| ಗ್ರಾಮ ಪಂಚಾಯತ್ | 14.69 |

ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸನ್ನು ಅನುಷ್ಠಾನಗೊಳಿಸಲು ಶಿಕ್ಷಕರ ಮತ್ತು ಉಪನ್ಯಾಸಕರ ವೇತನವನ್ನು ಜಿಲ್ಲಾ/ತಾಲ್ಲೂಕು ಪಂಚಾಯಿತಿಗಳ ವ್ಯಾಪ್ತಿಗಳಪಡಿಸಲಾಗಿದೆ. ಒಂದು ವೇಳೆ ಶಿಕ್ಷಕರ ಮತ್ತು ಉಪನ್ಯಾಸಕರ ವೇತನವನ್ನು ಜಿಲ್ಲಾ/ ತಾಲ್ಲೂಕು ಪಂಚಾಯಿತಿಗಳಿಂದ ಬದಲಿಸಿ ರಾಜ್ಯವಲಯಕ್ಕೆ ವರ್ಗಾಯಿಸಿದಲ್ಲಿ ಸಾಲವಲ್ಲದ ನಿವ್ವಳ ರಾಜ್ಯದ ರಾಜಸ್ವದಲ್ಲಿ (NLNORR) ಶೇಕಡವಾರು ಕಡಿಮೆಯಾಗಿ, ರಾಜ್ಯ ಹಣಕಾಸು ಆಯೋಗದ/ಕೇಂದ್ರ ಹಣಕಾಸು ಆಯೋಗ/ಮಹಾಲೇಖಪಾರು ಜಿಲ್ಲಾ/ತಾಲ್ಲೂಕು ಪಂಚಾಯಿತಿಗಳ ರಾಜಸ್ವ ಹಂಚಿಕೆಯು ಕಡಿಮೆಯಾಗಿರುವ ಬಗ್ಗೆ ಆಕ್ಷೇಪಿಸುವ ಸಂಭವವಿರುತ್ತದೆ.

ರಾಜ್ಯದ ಆಯವ್ಯಯದಲ್ಲಿ ಜಿಲ್ಲಾ ವಲಯದಡಿ ಒದಗಿಸುವ ಅನುದಾನವನ್ನು ಕ್ಲುಪ್ತ ವೇಳೆಯಲ್ಲಿ ಹಾಗೂ ಮುಂಚಿತವಾಗಿ ಕಂತುಗಳಲ್ಲಿ ವೇತನ/ವೇತನೇತರ ವೆಚ್ಚಗಳಿಗೆ ಬಿಡುಗಡೆಗೊಳಿಸಲಾಗುತ್ತಿದೆ. ಈ ರೀತಿ ಶಿಕ್ಷಕರ ಮತ್ತು ಉಪನ್ಯಾಸಕರ ವೇತನವು ಜಿಲ್ಲಾ/ತಾಲ್ಲೂಕು ಪಂಚಾಯಿತಿಗಳ ವ್ಯಾಪ್ತಿಯೊಳಗಿರುವುದು ವಿಳಂಬಕ್ಕೆ ಕಾರಣವಲ್ಲ. ಆದಾಗ್ಯೂ ಕ್ಲುಪ್ತ ವೇಳೆಯಲ್ಲಿ ವೇತನ ಬಿಲ್ಲುಗಳನ್ನು ತಯಾರಿಸಿ ಖಜಾನೆಗಳಿಗೆ ಸಲ್ಲಿಸದ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳ ವಿರುದ್ಧ ಕ್ರಮವಹಿಸಲಾಗುವ ಬಗ್ಗೆ ಸುತ್ತೋಲೆಯನ್ನು ಈಗಾಗಲೇ ಹೊರಡಿಸಲಾಗಿದೆ.

ಜಿಲ್ಲಾ/ತಾಲ್ಲೂಕು ವಲಯದಲ್ಲಿ ದೊಡ್ಡ ಪ್ರಮಾಣದಲ್ಲಿ ಶಿಕ್ಷಣ ಇಲಾಖೆಯ ಶಿಕ್ಷಕ ಸಿಬ್ಬಂದಿಗಳು ಇದ್ದು, ಇದಕ್ಕೆ ತಕ್ಕಂತೆ ಕಚೇರಿಗಳಲ್ಲಿ ಮಾನವ ಸಂಪನ್ಮೂಲ ಇಲ್ಲದಿರುವುದರಿಂದ ಬಿಲ್ಲುಗಳನ್ನು ತಯಾರಿಸುವ/ಖಜಾನೆಗೆ ಸಲ್ಲಿಸುವ ಕಾರ್ಯ ವಿಳಂಬವಾಗುತ್ತಿದೆ.

ಶಿಕ್ಷಕರು ಮತ್ತು ಉಪನ್ಯಾಸಕರುಗಳು ನಿಗದಿತ ಸಮಯದಲ್ಲಿ ವೇತನ ಆಗದೆ ಸಮಸ್ಯೆಗಳನ್ನು ಎದುರಿಸುತ್ತಿರುವ ವಿಷಯವು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದ್ದು, ಸಂಬಂಧಿಸಿದ ಇಲಾಖೆಗಳ ಹಂತದಲ್ಲಿ ಈ ಬಗ್ಗೆ ಸಮಾಲೋಚನೆ ನಡೆಸಿ ತೆಗೆದುಕೊಳ್ಳಬಹುದಾದ ಸುಧಾರಣೆ/ಪರಿಹಾರಗಳ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುವುದು.

ಸಂಖ್ಯೆ:ಆಇ 84 ವೆಚ್ಚ-8/2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯ ಮಂತ್ರಿ